## ಫ್ಲಿಪ್ ಕಾರ್ಟ್ ನ ಬಿಗ್ ಬಿಲಿಯನ್ ಡೇಸ್ ವೇಳೆ 70,000 ಕ್ಕೂ ಅಧಿಕ ನೇರ ಉದ್ಯೋಗ ಸೃಷ್ಟಿ

- **ಹಬ್ಬದ ಸಂದರ್ಭದಲ್ಲಿ ಲಕ್ಷಕ್ಕೂ ಹೆಚ್ಚು ಪರೋಕ್ಷ ಉದ್ಯೋಗವಕಾಶ**
- **ಮಾರಾಟ ಸ್ಥಳಗಳು, ಕಿರಾಣಗಳು, ವಿತರಣೆ ಪಾಲುದಾರರು, ಭದ್ರತೆ ಮತ್ತು ಸರಕು ಪಾಲುದಾರರ ಬಳಿ ಲಕ್ಷಾಂತರ ಉದ್ಯೋಗವಕಾಶ**
- **ಇ-ಕಾಮರ್ಸ್ ನಿರ್ವಹಣೆಗೆ ಪೂರಕವಾಗಿ ಹೊಸ ಉದ್ಯೋಗಿಗಳ ಕೌಶಲ್ಯ ಮಟ್ಟ ಹೆಚ್ಚಿಸಲು ತರಬೇತಿ**

ಬೆಂಗಳೂರು, ಸೆಪ್ಟೆಂಬರ್ 15, 2020: ಭಾರತದ ದೇಶೀಯ ಇ-ಕಾಮರ್ಸ್ ಮಾರ್ಕೆಟ್ ಪ್ಲೇಸ್ ಆಗಿರುವ ಫ್ಲಿಪ್ ಕಾರ್ಟ್, ಮುಂಬರುವ ಹಬ್ಬದ ಋತು ಮತ್ತು ಬಿಗ್ ಬಿಲಿಯನ್ ಡೇಸ್ (ಬಿಬಿಡಿ) ಸಂದರ್ಭದಲ್ಲಿ ದೇಶಾದ್ಯಂತ 70,000 ಕ್ಕೂ ಅಧಿಕ ನೇರ ಮತ್ತು ಲಕ್ಷಾಂತರ ಪರೋಕ್ಷ ಉದ್ಯೋಗ ಸೃಷ್ಟಿಗೆ ನೆರವಾಗಲಿದೆ. ಫ್ಲಿಪ್ ಕಾರ್ಟ್ ನ ನೇರ ಉದ್ಯೋಗ ಅವಕಾಶಗಳು ಸಪ್ಲೈ ಚೇನ್, ವಿತರಣೆ ಪ್ರತಿನಿಧಿಗಳು, ಪಿಕ್ಕರ್ಸ್, ಪ್ಯಾಕರ್ಸ್ ಮತ್ತು ಸಾರ್ಟರ್ಸ್ ಸೇರಿದಂತೆ ಇನ್ನಿತರೆ ಹುದ್ದೆಗಳನ್ನು ಒಳಗೊಂಡಿರುತ್ತವೆ. ಇದಲ್ಲದೇ, ಫ್ಲಿಪ್ ಕಾರ್ಟ್ ನ ಮಾರಾಟ ಪಾಲುದಾರ ಸ್ಥಳಗಳಲ್ಲಿ ಮತ್ತು ಕಿರಾಣಗಳಲ್ಲಿ ಹೆಚ್ಚುವರಿಯಾಗಿ ಪರೋಕ್ಷ ಉದ್ಯೋಗಗಳು ಸೃಷ್ಟಿಯಾಗಲಿವೆ. ಇದರೊಂದಿಗೆ ವೆಂಡರ್ ಸ್ಥಳಗಳು ಮತ್ತು ಸರಕು ಪಾಲುದಾರರ ಉದ್ಯಮಗಳಲ್ಲಿಯೂ ಉದ್ಯೋಗ ಸೃಷ್ಟಿಯಾಗಲಿವೆ. ಈ ಮೂಲಕ ಇಡೀ ಪರಿಸರ ವ್ಯವಸ್ಥೆಯು ಹಬ್ಬದ ಸಂದರ್ಭಕ್ಕಾಗಿ ಸಜ್ಜಾಗಿದೆ. ಪೂರೈಕೆ ಜಾಲದ ವಿಸ್ತರಣೆ ಮತ್ತು ಬಲವರ್ಧನೆಯಿಂದಾಗಿ ಲಕ್ಷಾಂತರ ಹೊಸ ಇ-ಕಾಮರ್ಸ್ ಬಳಕೆದಾರರು ತಡೆ ರಹಿತವಾಗಿ ಆನ್ ಲೈನ್ ಶಾಪಿಂಗ್ ಮಾಡಲು ಸಹಕಾರಿಯಾಗಲಿದೆ. ಈ ಗ್ರಾಹಕರಿಗೆ ಹಬ್ಬದ ಸಂದರ್ಭದಲ್ಲಿ ನಿರಂತರ ಸೇವೆ ಸಲ್ಲಿಸಲು ಮಾರಾಟ ಪಾಲುದಾರರು ಎಲ್ಲಾ ಸಿದ್ಧತೆ ಮಾಡಿಕೊಂಡಿದ್ದಾರೆ.

ಬಿಗ್ ಬಿಲಿಯನ್ ಡೇಸ್ ನ ಸಂಕೀರ್ಣತೆ ಮತ್ತು ಅದರ ಮಟ್ಟಕ್ಕೆ ಸಾಮರ್ಥ್ಯ, ಸಂಗ್ರಹ, ವಿಂಗಡಣೆ, ಪ್ಯಾಕಿಂಗ್, ಮಾನವ ಸಂಪನ್ಮೂಲಗಳು, ತರಬೇತಿ ಮತ್ತು ವಿತರಣೆಗೆ ಹೆಚ್ಚು ಹೂಡಿಕೆಗಳ ಅಗತ್ಯವಿರುತ್ತದೆ. ಇದು ಹಬ್ಬದ ಸಂದರ್ಭದಲ್ಲಿ ಹೆಚ್ಚುವರಿ ಉದ್ಯೋಗ ಸೃಷ್ಟಿಗೆ ನೆರವಾಗುತ್ತದೆ. ಈ ವರ್ಷ ಫ್ಲಿಪ್ ಕಾರ್ಟ್ ತನ್ನ ಪೂರೈಕೆ ಜಾಲದಲ್ಲಿ 70,000 ಕ್ಕೂ ಅಧಿಕ ಜನರಿಗೆ ಉದ್ಯೋಗ ಕಲ್ಪಿಸಲಿದೆ. ಇದರ ಜತೆಗೆ ತನ್ನ ಮಾರಾಟಗಾರರು ಮತ್ತು ಇತರೆ ಪರಿಸರ ವ್ಯವಸ್ಥೆ ಪಾಲುದಾರರ ಬಳಿ ಲಕ್ಷಾಂತರ ಪರೋಕ್ಷ ಹುದ್ದೆಗಳನ್ನು ಕಲ್ಪಿಸಲಿದೆ. 50,000 ಕ್ಕೂ ಅಧಿಕ ಕಿರಾಣ ಅಂಗಡಿಗಳನ್ನು ಪಾಲುದಾರರನ್ನಾಗಿ ಮಾಡಿಕೊಂಡಿರುವ ಫ್ಲಿಪ್ ಕಾರ್ಟ್ ಗೆ ಕಟ್ಟ ಕಡೆಯ ಸ್ಥಳದವರೆಗೆ ವಿತರಣೆ ಮಾಡಲು ಸಾಧ್ಯವಾಗುತ್ತದೆ.

ಇದರೊಂದಿಗೆ ಹಬ್ಬದ ಸಂದರ್ಭದಲ್ಲಿ ಲಕ್ಷಾಂತರ ಪ್ಯಾಕೇಜ್ ಗಳ ವಿತರಣೆಗೆಂದು ಸಾವಿರಾರು ಕಾಲಾವಧಿ ಉದ್ಯೋಗಗಳನ್ನು ಕಲ್ಪಿಸಲಿದೆ.

ಫ್ಲಿಪ್ ಕಾರ್ಟ್ ನ ಇಕಾರ್ಟ್ ಮತ್ತು ಮಾರ್ಕೆಟ್ ಪ್ಲೇಸ್ ನ ಹಿರಿಯ ಉಪಾಧ್ಯಕ್ಷ ಅಮಿತೇಶ್ ಝಾ ಅವರು ಈ ಬಗ್ಗೆ ಮಾತನಾಡಿ, ``ನಮ್ಮ ಗ್ರಾಹಕರು ಮತ್ತು ಪರಿಸರವ್ಯವಸ್ಥೆಯ ಪಾಲುದಾರರ ಜೀವನದಲ್ಲಿ ಹಬ್ಬಗಳ ಪ್ರಾಮುಖ್ಯತೆ ಎಷ್ಟಿದೆ ಎಂಬುದನ್ನು ಫ್ಲಿಪ್ ಕಾರ್ಟ್ ಅರ್ಥ ಮಾಡಿಕೊಂಡಿದೆ. ಈ ನಿಟ್ಟಿನಲ್ಲಿ ನಾವು ಪರಿಣಾಮಕಾರಿಯಾದ ಪಾಲುದಾರಿಕೆಗಳನ್ನು ಮಾಡಿಕೊಂಡಿದ್ದೇವೆ. ಈ ಪಾಲುದಾರಿಕೆಯು ಅತ್ಯುದ್ಭುತವಾದ ಗ್ರಾಹಕ ಅನುಭವವನ್ನು ನೀಡುವುದಲ್ಲದೇ, ಇಡೀ ಪರಿಸರ ವ್ಯವಸ್ಥೆಯಲ್ಲಿ ಹೆಚ್ಚುವರಿ ಆದಾಯವನ್ನು ಗಳಿಸಲು ನೆರವಾಗುತ್ತದೆ. ಇದೇ ವೇಳೆ ಬಿಗ್ ಬಿಲಿಯನ್ ಡೇಸ್ (ಬಿಬಿಡಿ) ಅವಧಿಯಲ್ಲಿ ತಮ್ಮ ಮಾರಾಟವನ್ನು ಉತ್ತಮಪಡಿಸಿಕೊಳ್ಳಲು ಅವಕಾಶ ಮಾಡಿಕೊಡುತ್ತದೆ. ಮುಂಚೂಣಿಯಲ್ಲಿರುವ ಇ-ಕಾಮರ್ಸ್ ಸಂಸ್ಥೆಯಾಗಿ ಕಾರ್ಮಿಕ ಶಕ್ತಿಗೆ ನೀಡುತ್ತಿರುವ ನಮ್ಮ ತರಬೇತಿ ಮತ್ತು ಹೂಡಿಕೆಗೆ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯೋಗವಕಾಶಗಳನ್ನು ಹೆಚ್ಚು ಮಾಡುತ್ತಿರುವುದರ ಬಗ್ಗೆ ಸಾಕಷ್ಟು ಮೆಚ್ಚುಗೆ ವ್ಯಕ್ತವಾಗಿದೆ. ಉದ್ಯೋಗ ಸೃಷ್ಟಿ ಮಾಡುತ್ತಿರುವುದು ಮತ್ತು ಈ ಸಂದರ್ಭದಲ್ಲಿ ನಮ್ಮ ಮಾರಾಟಗಾರರು ತಮ್ಮ ವ್ಯವಹಾರಗಳನ್ನು ಹೆಚ್ಚು ಮಾಡಿಕೊಳ್ಳಲು ಅವಕಾಶವನ್ನು ಕಲ್ಪಿಸುತ್ತಿದ್ದೇವೆ. ಅಲ್ಲದೇ, ಇದಕ್ಕೆ ಪೂರಕವಾಗಿ ನಾವು ಉದ್ಯಮ ಮತ್ತು ಆರ್ಥಿಕತೆಯ ಪ್ರಗತಿಯ ಭಾಗವಾಗಿದ್ದೇವೆ'' ಎಂದು ತಿಳಿಸಿದರು.

ಫ್ಲಿಪ್ ಕಾರ್ಟ್ ತನ್ನ ನೇರ ನೇಮಕಾತಿ ಮಾಡಿಕೊಂಡಿರುವ ಉದ್ಯೋಗಿಗಳಿಗೆ ವಿವಿಧ ಆಯಾಮಗಳಲ್ಲಿ ತರಬೇತಿಯನ್ನು ನೀಡುತ್ತಿದೆ. ಇದರಲ್ಲಿ ಪ್ರಮುಖವಾಗಿ ತರಗತಿ ಮತ್ತು ಡಿಜಿಟಲ್ ತರಬೇತಿಯನ್ನು ನೀಡುವ ಮೂಲಕ ವಿತರಣಾ ಜಾಲದ ಬಗ್ಗೆ ಮಾಹಿತಿ ಮತ್ತು ಮಾರ್ಗದರ್ಶನ ನೀಡುತ್ತಿದೆ. ಈ ತರಬೇತಿಯಿಂದ ಉದ್ಯೋಗಿಗಳು ಪೂರೈಕೆ ಜಾಲ ಅಥವಾ ಕೊಂಡಿಯ ನಿರ್ವಹಣೆ ಬಗ್ಗೆ ಜ್ಞಾನವನ್ನು ಹೆಚ್ಚಿಸಿಕೊಳ್ಳಬಹುದಾಗಿದೆ. ಇವುಗಳಲ್ಲಿ ಗ್ರಾಹಕ ಸೇವೆ, ವಿತರಣೆ, ಸ್ಥಾಪಕತ್ವ, ಸುರಕ್ಷತೆ ಮತ್ತು ಸ್ಯಾನಿಟೈಸೇಷನ್ ಕ್ರಮಗಳು ಸೇರಿರುತ್ತವೆ. ಅದೇರೀತಿ ಕೈಯಿಂದ ಹಿಡಿಯುವ ಸಾಧನಗಳನ್ನು ಯಾವ ರೀತಿ ಸುರಕ್ಷಿತವಾಗಿ ಹಿಡಿದಾಡಬೇಕು ಎಂಬುದರ ಬಗ್ಗೆಯೂ ಮಾರ್ಗದರ್ಶನ ನೀಡಲಾಗುತ್ತದೆ. ಪಿಒಎಸ್ ಯಂತ್ರಗಳು, ಸ್ಕ್ಯಾನರ್ ಗಳು, ವಿವಿಧ ಮೊಬೈಲ್ ಅಪ್ಲಿಕೇಷನ್ ಗಳು ಮತ್ತು ಇಆರ್ ಪಿಗಳನ್ನು ಬಳಕೆ ಮಾಡುವಾಗ ತೆಗೆದುಕೊಳ್ಳುವ ಸುರಕ್ಷತಾ ವಿಧಾನಗಳನ್ನು ಮನವರಿಕೆ ಮಾಡಿಕೊಡಲಾಗುತ್ತದೆ. ಈ ಸಂದರ್ಭದಲ್ಲಿ ತೆಗೆದುಕೊಳ್ಳುತ್ತಿರುವ ತರಬೇತಿಯು ಭವಿಷ್ಯಕ್ಕೆ ಸಿದ್ಧ ಕೌಶಲ್ಯಗಳನ್ನು ಕಲಿತುಕೊಳ್ಳಲು

ಮತ್ತು ಭಾರತದಲ್ಲಿ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ಇ-ಕಾಮರ್ಸ್ ಉದ್ಯಮದಲ್ಲಿ ವೃತ್ತಿ ಪ್ರಗತಿಯನ್ನು ಸಾಧಿಸಲು ನೆರವಾಗುತ್ತದೆ.

ಲಕ್ಷಾಂತರ ಮಾರಾಟ ಪಾಲುದಾರರು, ಎಂಎಸ್ಎಂಇಗಳು ಮತ್ತು ಕುಶಲಕರ್ಮಿಗಳು ಸೇರಿದಂತೆ ಹಲವಾರ ಮಂದಿಗೆ ಹಬ್ಬದ ಋತುವನ್ನು ತಿಂಗಳುಗಳ ಮುನ್ನವೇ ಸಿದ್ಧತೆ ನಡೆಸಲು ಫ್ಲಿಪ್ ಕಾರ್ಟ್ ನೆರವಾಗುತ್ತದೆ. ದಾಸ್ತಾನು ನಿರ್ವಹಣೆ, ಪ್ಯಾಕೇಜಿಂಗ್ ಸೇರಿದಂತೆ ಇನ್ನಿತರೆ ವಿಭಾಗಗಳ ನಿರ್ವಹಣೆ ಕುರಿತು ಫ್ಲಿಪ್ ಕಾರ್ಟ್ ಸೂಕ್ತ ತರಬೇತಿಯನ್ನು ನೀಡುತ್ತಿದೆ. ಸರ್ಕಾರದ ರಾಷ್ಟ್ರೀಯ ಕೌಶಲ್ಯ ಅಭಿವೃದ್ಧಿ ಮಿಷನ್ ನ ಮಾರ್ಗಸೂಚಿಗಳು ಮತ್ತು ಸ್ಥಳೀಯರಿಗೆ ಉದ್ಯೋಗ ಮತ್ತು ಆರ್ಥಿಕ ಬೆಳವಣಿಗೆಗೆ ಪೂರಕವಾದ ರೀತಿಯನ್ನು ಅನುಸರಿಸಿ ಇಡೀ ನೇಮಕಾತಿ ಮತ್ತು ಕೌಶಲ್ಯಾಭಿವೃದ್ಧಿ ಪ್ರಕ್ರಿಯೆಯನ್ನು ಕೈಗೊಳ್ಳಲಾಗುತ್ತದೆ.

ಫ್ಲಿಪ್ ಕಾರ್ಟ್ ತಂತ್ರಜ್ಞಾನ ಶಕ್ತಗೊಂಡ ಶಕ್ತಿಶಾಲಿಯಾದ ಪೂರೈಕೆ ಚೈನ್ ಅನ್ನು ಹೊಂದಿದ್ದು, ಅಸ್ಸಾಂನ ನಾಂಗಾವ್ ಮತ್ತು ಮಹಾರಾಷ್ಟ್ರದ ಹದಾಸಪುರ, ಕೇರಳದ ಕಣ್ಣೂರಿನಂತಹ ಸೇವೆ ಸಲ್ಲಿಸಲು ಅವಕಾಶವಿರುವ ಸ್ಥಳಗಳಿಗೆ ಲಕ್ಷಾಂತರ ಶಿಪ್ ಮೆಂಟ್ ಗಳನ್ನು ವಿತರಣೆ ಮಾಡುತ್ತಿದೆ. ಕಳೆದ ಹಲವು ವರ್ಷಗಳಲ್ಲಿ ಸಂಸ್ಥೆಯು ತನ್ನ ಸಪ್ಲೈ ಚೈನ್ ಮೂಲಕ ಲಕ್ಷಾಂತರ ಉದ್ಯೋಗವಕಾಶಗಳನ್ನು ಕಲ್ಪಿಸಿದೆ. ಇದರ ಜತೆಗೆ ಉದ್ಯಮಶೀಲತ್ವ ಮತ್ತು ಹಬ್ಬದ ಉದ್ಯೋಗವಕಾಶಗಳು ಹಾಗೂ ಬಿಗ್ ಬಿಲಿಯನ್ ಡೇಸ್ ಸಂದರ್ಭದಲ್ಲಿ ಸಾಕಷ್ಟು ಉದ್ಯೋಗವಕಾಶಗಳನ್ನು ಕಲ್ಪಿಸುತ್ತಿದೆ.

**About the Flipkart Group**

The Flipkart Group is one of India's leading digital commerce entities and includes group companies Flipkart, Myntra, and PhonePe. Started in 2007, Flipkart has enabled millions of consumers, sellers, merchants and small businesses to be a part of India's e-commerce revolution, with a registered customer base of over 250 million, offering over 150 million products across 80+ categories. Our efforts to democratize e-commerce in India, drive access and affordability, delight customers, create lakhs of jobs in the ecosystem and empower generations of entrepreneurs and MSMEs has inspired us to innovate on many industry firsts. The recent launch of Flipkart Wholesale, our new digital marketplace, is a testament to our commitment to accelerate the growth of kiranas and MSMEs in India. Flipkart is known for pioneering services such as Cash on Delivery, No Cost EMI and easy returns –customer-centric innovations that have made online shopping more accessible and affordable for millions of Indians. Together with Myntra, which holds a prominent position in the online fashion market, PhonePe, India's

fastest growing digital payments platform, and now Flipkart Wholesale, the Flipkart Group will continue to steer the transformation of commerce in India through technology.

**For more details contact:** media@flipkart.com